# SAPHSS AGALPADY




# ಕಣಜ

KERALA INFRASTRUCTURE AND TECHNOLOGY FOR EDUCATION

little KITEs

# ಸಂದೇಶ



ನಮ್ಮ ಶಾಲೆಯ "Little KITEs" ನೇತೃತ್ವದಲ್ಲಿ " ಕಣಜ " ಎಂಬ " Digital magazine " ಹೊರತರುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಮಾಹಿತಿ ವಿನಿಮಯ ತಂತ್ರ ಜ್ಞಾನವನ್ನುಪಯೋಗಿಸಿ ತಮ್ಮ ಸೃಜನಶೀಲ ಪ್ರತಿಭೆಯನ್ನು ಹೊರತರಲು ಒಂದು ಮುಕ್ತ ಅವಕಾಶವಾಗಿದೆ. ಅಧ್ಯಾಪಕರ ಮಾರ್ಗದರ್ಶನದಿಂದ ಉತ್ತಮ ಪತ್ರಿಕೆಯಾಗಿ ಮೂಡಿಬರಲು ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಇದು ಸಹಕಾರಿಯಾಗಿದೆ. ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಶುಭವಾಗಲೆಂದು ಹಾರೈಸುತ್ತೇನೆ.

- ಗಿರೀಶ .ಯನ್

ಮುಖ್ಯೋಪಾಧ್ಯಾಯರು

# ಕಣಜ



ವಿದ್ಯಾವಂತರ ನಾಡು ಕೇರಳ, ಈಗ ಕಂಪ್ಯೂಟರ್ ಸಾಕ್ಷರತೆಯ ರಾಜ್ಯವಾಗಿ ಪರಿವರ್ತನೆಯಾಗುತ್ತಿರುವುದು ಸಂತೋಷದ ವಿಚಾರ. ಇದು ಸಾಕಾರಗೊಳ್ಳಬೇಕಾದರೆ ಮೊತ್ತ ಮೊದಲು ಕೇರಳದ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಂಪ್ಯೂಟರ್ ಸಾಕ್ಷರತೆಯನ್ನು ಪಡೆಯಬೇಕಾಗಿರುವುದು ಅತೀ ಅಗತ್ಯ . ಇದರ ಅಂಗವಾಗಿ ಪ್ರತಿಯೊಂದು ಶಾಲೆಯಲ್ಲಿಯೂ ಕೇರಳ ಸರ್ಕಾರವು “ಲಿಟಲ್ ಕೈಟ್” ಎಂಬ ಹೊಸ ಯೋಜನೆಯೊಂದನ್ನು ಅನುಷ್ಠಾನಕ್ಕೆ ತಂದಿರುವುದು ಸಂತಸದ ವಿಚಾರವೇ ಸರಿ.ಈ ಯೋಜನೆಯ ಅಡಿಯಲ್ಲಿ ತರಬೇತಿ ಹೊಂದಿದ ವಿದ್ಯಾರ್ಥಿಗಳು ಮಾಡುವ ಮೊತ್ತ ಮೊದಲ ಪ್ರಯತ್ನವೆ **“ಡಿಜಿಟಲ್ ಸಂಚಿಕೆ ”**.

ಈ ಚಿಣ್ಣರ ಲೋಕದ ಪಯಣದಲ್ಲಿ ಮಕ್ಕಳ ಸ್ವರಚಿತ ಕವನಗಳು, ಕತೆಗಳು, ಚಿತ್ರ ಕಲೆ ಹಾಗೂ ಲೇಖನ ಇತ್ಯಾದಿ ಸಾಹಿತ್ಯ ಪ್ರಕಾರಗಳು ಅನಾವರಣಗೊಂಡಿವೆ. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಕವಾಗಿರುವ ಪ್ರತಿಭೆಯನ್ನು ಹೊರತರಲು ಈ ಸಂಚಿಕೆ ಉತ್ತಮ ವೇದಿಕೆಯಾಗಿದೆ . ಈ ಪುಟಾಣಿಗಳ ಪುಟ್ಟಪುಟ್ಟ ಹೆಜ್ಜೆ ಮುಂದೆ ಸಮಾಜದಲ್ಲಿ ಎಲ್ಲರೂ ಗುರುತಿಸುವಂತಾಗಲಿ ಎಂದು ಹಾರೈಸುವ.

- ರಾಧಾಮಾಧವ

**Staff Editor**

# EDITORIAL BOARD

Chief Editor : Gireesha .N.
Headmaster

SITC : Udaya Narayana Bhat.U.

Staff Editor : Radhamadhava .A.

Little Kite Teachers : Govinda Raj K
Kalavathi.B.

Student Editor : Athmika.U.
Supreetha.Rai

## Members

Prajwal.S.

Fathimath Meharufa

Shreevani .M.S.

Rosemary

Shilpa .K.

# ಅನುಕ್ರಮಣಿಕೆ

The history of our school ........7
ಲಿಟಲ್ ಕೈಟ್ಸ್ ........10
ಪ್ರಕೃತಿಯ ಕೊಡುಗೆ ........11
ಬಾಲ್ಯದ ನೆನಪು ........12
ಪ್ರಕೃತಿ ........14
What can I say ........15
ಆಶಾ ಕಿರಣ ........16
ಕಂಪ್ಯೂಟರ್ ಜಗತ್ತು ........17
ಅಮ್ಮನ ಪ್ರೀತಿ ........18
ನನ್ನ ಕನಸು ........19
ಬೆಕ್ಕು ನೀಡಿದ ಊಟ ........20
ನರಿಯ ಕಪಟ ಬುದ್ಧಿ ........22
ಒಂದು ಹುಲ್ಲು ಕಡ್ಡಿಯ ಜೀವ್ರೋತ್ಸಾಹ ........24
ಮೋಹಿನಿಯಾಟ್ಟಂ ........26
ವಯನಾಡಿನ ಸೌಂದರ್ಯ ........28
ನಾನೂ ಹಾರಬೇಡವೇ ? ........31
ನಿರ್ಮಲ ಪ್ರಕೃತಿಗಾಗಿ ........35
ಕೇರಳದ ದುರಂತ ........38

ರಾಣಿ ಲಕ್ಷ್ಮೀಬಾಯಿ ....................................................................39
A walk in the moonlight night ....................................................41
समस्यापूरणम् ...........................................................................43
Drawing .....................................................................................44
Digital Painting .........................................................................45
Drawing .....................................................................................46
Our Little KITEs Unit.................................................................57

# *The History of our School*

*The history of our school is written in golden letters. It starts from pre-independent India. Our forefathers got first vision for promoting Sanskrit learning among Karada Brahmins of this locality in 1923. They formed a 'Karada Brahmana Vidyabhivardhaka Sangha' and established Sanskrit school in 1923 at Shri Durgaparameshwari Temple, Agalpady Ubrangala. This locality belonged to Dakhsina Kannada district. Later their great effort and hard work cherished their dreams by transferring it into an Oriental High School at Agalpady Ubrangala in 1952. This sacred learning centre was flourished well and reconstituted as Aided Lower Primary School in 1956 when Kerala State came into existence.*

*Pupils came from distant places this to sacred; learning centre. This excellent learning centre was upgraded as High School in 1963 by the Honourable Government of*

*Kerala. Medium of instruction up to High School is Kannada. Our students and Teachers held its reputation high. The achievement and performance of our School was recognized by the Honourable Government of Kerala again by upgrading it as Higher secondary School in 2010. The Higher Secondary classes has been started functioning hi August 2010. Our School is number one in Kumbla Sub-District. Our School is one among the topper in Kasaragod district.*

*The Higher Secondary school is located in four acres of land surrounded by natural scenery at Jayanagara in Kumbdaje Village. It is one km away from Badiadka-Mulleria Road. The chief attraction of our school is the cool and calm surroundings. Our campus is blessed with the presence of greenery.*

*The timely intervention of the efficient Management Committee cherished the dream and demands of the pupils, parents and teachers. We have a modernized office with internet, well equipped science laboratories, advanced library and a smart computer lab. We have newly built three storeyed*

*concrete building with spacious class rooms. We offer the best academic experience to the pupils.*

*Now our school stands up proudly among other institutions with excellent academic result. This diary has been planned with a view to help students in framing the healthy habits of doing work in a systematic way and studying regularly.*

# ಲಿಟಲ್ ಕೈಟ್ಸ್

ನಾನೊಂದು ಪುಟ್ಟ ಗಾಳಿಪಟ

ನಾನೆಂದರೆ ಮಕ್ಕಳಿಗೆಲ್ಲಾ ಬಲು ಇಷ್ಟ |

ನಾನು ಕಲಿಸುವೆನು ಅವರಿಗೆ

ಮುಂದುವರಿದ ಇಂದಿನ ಜಗತ್ತಿನ ಬಗೆ ||

- ಶಿಲ್ಪ. ಕೆ .

9 ಬಿ ತರಗತಿ

# ಪ್ರಕೃತಿಯ ಕೊಡುಗೆ

ಆಹಾ ಬೀಸುತಿದೆ ತಂಪಾದ ಗಾಳಿ
ಎಲ್ಲರೂ ಬೇಗ ಏಳಿ ಎದ್ದೇಳಿ |
ಅನುಭವಿಸಿ ಶುಭ ಮುಂಜಾನೆ
ನಿಮ್ಮ ನಿದ್ದೆಗೆ ಕೊಡಿ ಕೊನೆ ||



ಹಕ್ಕಿಗಳು ತೊಡಗಿದವು ಅವರ ಕೆಲಸ
ನೋಡಿ ಶುಭ್ರ ಆಗಸ |
ಈಗ ನೀವು ತೊಡಗಿ ಕೆಲಸ
ತಿಳಿದು ಕಾಯಕವೇ ಕೈಲಾಸ ||

ನೋಡಿ ಬೆಳೆದು ನಿಂತ ಗಿಡಮರ
ನೀಡುವುದು ಅವು ನಮಗೆ ನೆರಳ |
ಇದುವೇ ಪ್ರಕೃತಿಯ ಸಹಬಾಳ್ವೆಯ ತತ್ವ
ಇರಲಿ ನಿಮ್ಮಲ್ಲಿಯೂ ಸಹಭಾಗಿತ್ವ ||

- ಕಾರ್ತಿಕ ಶ್ಯಾಮ ಯಂ
8 ಬಿ ತರಗತಿ

# ಬಾಲ್ಯದ ನೆನಪು



ಸ್ವಚ್ಛಂದವಾದ ಮನಸಿನಲಿ
ನೂರೊಂದು ನೆನಪುಗಳು
ಕ್ಷಣ ಮಾತ್ರ ಹತ್ತಿರ ಸುಳಿದು
ನಗೆಯನ್ನ ತರಿಸುವ ನೆನಪೇ
ಬಾಲ್ಯದ ನೆನಪುಗಳು ||

ನಾವಾಡಿದ ಮಣ್ಣಿನಾಟ
ಕಟ್ಟುತ್ತಿದ್ದ ಮರಳಿನ ಗೋಪುರಗಳು
ಜೊತೆಗೂಡಿ ಆಡಿದ ಮರಕೋತಿಯಾಟ
ಮರದಿಂದ ಕೆಳಗೆ ಬಿದ್ದು ದಕ್ಕಿಸಿಕೊಂಡ ಏಟುಗಳು
ಬಲುಚಂದ ಗೆಳೆಯರ ಒಡನಾಟ ||

ಸುಂದರವಾದ ಆಟ ಗಿಲ್ಲಿದಾಂಡು
ಎಲ್ಲಾಕಡೆ ಹುಡುಗರದೇ ದಂಡು
ಕಣ್ಣು ಮುಚ್ಚಾಲೆ ಆಟದಲಿ
ಗೆಳೆಯನ ಕಣ್ಣು ತಪ್ಪಿಸಿ
ಗುರಿ ಮುಟ್ಟುತ್ತಿದ್ದೆವು ಸಂತಸದಲಿ ||

ಮಳೆರಾಯನ ಜೊತೆ ಕುಣಿದ ಕ್ಷಣಗಳು

ಕಾಗದದ ದೋಣಿ ನೀರಲ್ಲಿ

ತೇಲಿಬಿಟ್ಟ ಹಸಿ ಹಸಿ ನೆನಪುಗಳು

ಜಾತ್ರೆ ನಾಟಕದ ಗಮ್ಮತ್ತುಗಳು

ಹೋಂವರ್ಕ್ ಮಾಡದೇ ತಿಂದ ಪೆಟ್ಟುಗಳು ||

ಬೇಸಿಗೆ ರಜೆಗಾಗಿ ಕಾಯುವೆವು

ಅಜ್ಜಿಮನೆಗೆ ಹೋಗುವ ತವಕವು

ದೀಪಾವಳಿಯಂದು ಕೈ ಸುಟ್ಟುಕೊಂಡ ಮಮತೆಯು

ಕುಚೇಷ್ಟೆಗಳಿಗೆ ನಾನೇ ರುವಾರಿಯು ||

ಏಳು ಬೀಳಿನ ಬಾಳಿನಲ್ಲಿ

ನೆನಪುಗಳು ಮಾತ್ರ ಜೊತೆಗಾಗಿ

ಬಣ್ಣದ ಕನಸಾಗಿ

ನೆನಪಿನ ಓಕುಳಿಯಗಿ

ಮರಳಿ ಬರಬಹುದೇ ?

- ಸಮರ್ಥ ರೈ ಎನ್

8 ಬಿ ತರಗತಿ

# ಪ್ರಕೃತಿ

ನಮ್ಮ ಪ್ರಕೃತಿ ಸುಂದರ
ಜೀವಿಗಳಿರುವ ಮಂದಿರ |
ಅದು ಅತೀ ಸುಂದರ
ನಮ್ಮ ಪ್ರಕೃತಿ ಸುಂದರ ||

ಮನುಜನು ಕಡಿವನು ಮರವನು
ಉಳಿಸಬೇಕು ಕಾಡನು |
ಉಳಿಸುವ ನಾವು ನಾಡನು
ಕಟ್ಟುವ ನಾವು ಬಾಳನು ||



ಪ್ರಕೃತಿಯ ಸುಂದರ ನೋಟವು
ತಂಪಾದ ಜೀವನವು |
ಅರಳುತಿದೆ ಹೂವು
ಮರಗಳ ಬೆಳೆಸುವೆವು ನಾವು ||

ನದಿಯು ಬೇಗನೆ ಹರಿಯುತಿದೆ
ನವಿಲಿನ ನಾಟ್ಯ ಕಾಣುತಿದೆ |
ಹಕ್ಕಿಗಳ ಕೂಗು ಕೇಳುತಿದೆ
ತಂಪಾದ ಗಾಳಿ ಬೀಸುತಿದೆ ||

-ಶ್ರೀಶ
5 ಬಿ ತರಗತಿ

# What can I say

Wind was blowing through my hair,
Silently I said,'what's this dear?'
Shadow started  walk with me along.
I said, 'don't follow me, do bang, be strong'.

While walking on street raindrop kissed my cheeks,
Instantly I said, 'come heavily with your friends',
Never thought it would listen to me ,
My mind said to it, 'let's dance with me.'

Oh...my wet clothes will make momy tense
I said to me, 'you can't face ,think some ideas'
My angel ran with the umbrella
I said  again to myself ,'what can I say'...



- Sowjanya .B.
10 B Standard

# ಆಶಾ ಕಿರಣ

ಕಾಣದ ಮಾಯೆಯ ಅರಸಿ
ಸಾಗಿಹುದು ಈ ಪಯಣ |
ಮನದ ಬವಣೆಯನಿಂದು
ತಣಿಯಲೋಸುಗ ||



ಎತ್ತಣ ಹಾದಿ ಎತ್ತಣ ಗುರಿಯೋ
ಅರಿಯಲಿಲ್ಲ ಎನಗೆ |
ಭಾವನೆಗಳಿಲ್ಲದ ತ್ಯಾಜ್ಯ ಭೂಮಿಯಲಿ
ಬಾಳ ಯಾತ್ರಿಯಾಗಿಹೆನು ನಾನು ||

ಹೊನ್ನು - ಮಣ್ಣಿನ ಆಸೆ ನನಗಿಲ್ಲ
ಬಂಗಲೆ - ಕಾರುಗಳ ಹಂಬಲ ಎನಗಿಲ್ಲ |
ಕಾಯುತಿಹುದು ಈ ಮನ ಹೊಸತನಕೆ
ಭರವಸೆಯ ಆಶಾಕಿರಣದೊಂದಿಗೆ ||

- ಸುಪ್ರೀತ

9 ಬಿ ತರಗತಿ

# ಕಂಪ್ಯೂಟರ್ ಜಗತ್ತು

ಕಂಪ್ಯೂಟರ್ ನೀನು ಜಗತ್ತಿನ ಟ್ಯೂಟರ್
ಎಲ್ಲೆಡೆ ನಿನ್ನದೇ ಕಾರುಬಾರು
ನಿನ್ನನ್ನು ಅರಿಯದವರ ಜೀವನ ಬಲು ಬೋರು
ಮೋದಿಯಿಂದ ಹೆಚ್ಚಿತ್ತು ನಿನ್ನ ಬಳಕೆ
ಹೆಚ್ಚಾಯಿತು ನೆಟ್ ವರ್ಕ್ ಕಂಪನಿಗಳು

ನಿನಗಾಗಿಯೇ ಬಂಡವಾಳದಲ್ಲಾಯಿತು ವಿಶೇಷ ಹೂಡಿಕೆ
ಈಗ ಎಲ್ಲೆಂದರಲ್ಲಿ ನಿನ್ನದೆ ಬೇಡಿಕೆ
ನಿನ್ನ ಎಲ್ಲರೂ ಅರಿಯಲೇ ಬೇಕು
ಗಮನಹರಿಸುವರು ಶಾಲೆಗಳಲಿ
ನಿನ್ನ ಕಲಿಕೆಗಾಗಿ ಹಾತೊರೆಯುವರು ವಿದ್ಯಾರ್ಥಿಗಳು




- ಉಷಾ ಕುಮಾರಿ
10 ಬಿ ತರಗತಿ

# ಅಮ್ಮನ ಪ್ರೀತಿ

ಹೆತ್ತ ಹೊತ್ತ ತಾಯಿಗೊಂದು ನನ್ನ ನಮನ
ನೀನಿಲ್ಲದಿದ್ದರೆ ನಾನೂ ಇಲ್ಲ |
ನಿನ್ನ ಪ್ರೀತಿಯಲ್ಲೇ ಬೆಳೆದ ಕಂದ
ನಾನೇ ನಿನ್ನ..... ಮುದ್ದು ಕಂದ ||

- ರವಿ ಶಂಕರ ಉಪ್ಪಂಗಳ
10 ಬಿ ತರಗತಿ



# ನನ್ನ ಕನಸು



ಹಲವು ವಿದ್ಯೆಗಳ
ಕಲಿವ ಆಸೆಯೆನಗೆ |
ಎಂದು ನನಸಾದೀತೋ
ಈ ನನ್ನ ಕನಸು ||

ಕನಸಲು ನನ್ನ ಮನಸು
ತುಂಬಿ ತುಳುಕುವ ಎನ್ನ ಮನಸು |
ಅದೆಂದೋ ನನಸಾದೀತೋ
ಈ ನನ್ನ ಕನಸು ||

ಇದರಲೇ ಮಗ್ನನಾಗಿಹೆ ನಾನು
ಕೈ ಹಿಡಿದು ಮುನ್ನಡೆಸು ಬಾ |
ಓ.... ನನ್ನ ದೇವ
ನಿನ್ನನೇ ನಂಬಿಹೇ ಓ... ದೇವ ದೇವ ||

- ರವಿ ಶಂಕರ ಉಪ್ಪಂಗಳ
10 ಬಿ ತರಗತಿ

# ಬೆಕ್ಕು ನೀಡಿದ ಊಟ



ಒಂದು ದಿನ ಬೆಕ್ಕೊಂದು ತನ್ನ ಮನೆಗೆ ಊಟಕ್ಕೆ ಬರುವಂತೆ ಇಲಿಗಳನ್ನು ಕರೆಯಿತು. ಇಲಿಗಳಿಗೂ ಬೆಕ್ಕುಗಳಿಗೂ ಜನ್ಮಾಂತರದಿಂದ ದ್ವೇಷ. ಆದರೆ ಇಂತಹ ದ್ವೇಷ ಎಂದಿಗೂ ಮರೆಯುವಂತೆ ಇರಲಿಲ್ಲ. "ಇಲಿಗಳೇ! ಇಲ್ಲಿ ತನಕ ಶತ್ರುತ್ವವನ್ನು ಸಾಧಿಸಿದ್ದು ಸಾಕು. ಮುಂದಿನ ದಿನಗಳಲ್ಲಿ ಮಿತ್ರರಂತೆ ಇರೋಣ" ಎಂಬ ಬೆಕ್ಕಿನ ಮಾತು ಕೇಳಿ ಇಲಿಗಳಿಗೆ ಸಂತೋಷವಾಯಿತು. ಬಹುಶಃ ಬೆಕ್ಕು ತಮ್ಮನ್ನು ಮೋಸ ಮಾಡಬಹುದು ಎಂಬ ಅನುಮಾನ ಇಲಿಗಳಿಗೆ ಇರಲಿಲ್ಲ. ಸಂಜೆಯಾಯಿತು. ಇಲಿಗಳು ಬಣ್ಣ ಬಣ್ಣದ ಬಟ್ಟೆಗಳನ್ನು ತೊಟ್ಟು ಸುಂದರವಾಗಿ ಅಲಂಕಾರ ಮಾಡಿಕೊಂಡು ಬೆಕ್ಕಿನ ಮನೆಗೆ ಔತಣಕ್ಕೆ ಬಂದವು.

ಬೆಕ್ಕು ಆದರದಿಂದ ಇಲಿಗಳನ್ನು ಸ್ವಾಗತಿಸಿತು. ಇಲಿಗಳಿಗೆ ಬೆಕ್ಕಿನ ವರ್ತನೆ ಕಂಡು ಸಂತೋಷವಾಯಿತು. ಇಲಿಗಳು ಸೇರಿಕೊಂಡು ಸಂತೋಷದಿಂದ ನರ್ತನ ಮಾಡಿದವು. ಬೆಕ್ಕು ಅನೇಕ ವಿಷಯಗಳನ್ನು ಇಲಿಗಳಿಗೆ ತಿಳಿಸಿ ಭಾಷಣ ಮಾಡಿತು. ಎಷ್ಟೇ ಸಮಯ ಕಳೆದರೂ ಮೋಜು ಬರಲಿಲ್ಲ. ಇಲಿಗಳ ತಾಳ್ಮೆ ಕಳೆಯಿತು.

ಕೆಲವು ಇಲಿಗಳು ಕೋಪಗೊಂಡು, "ಬೆಕ್ಕೇ! ನಮಗೆ ಹಸಿವಾಗುತ್ತಿದೆ. ನಾವು ಬಹಳ ಹೊತ್ತಿನಿಂದ ಊಟಕ್ಕಾಗಿ ಕಾಯುತ್ತಿದ್ದೇವೆ " ಎಂದು ಹೇಳಿತು. "ನನ್ನ ಊಟವೇ ಆಗಿಲ್ಲ! ಇನ್ನು ನಿಮಗೆ ಎಲ್ಲಿಂದ ಊಟ ತರಲಿ ?" ಎಂದು ಹೇಳಿತು. ಬೆಕ್ಕು ಇಲಿಗಳ ಮೇಲೆ ಹಾರಿ ಇಲಿಗಳನ್ನು ಹಿಡಿದುಕೊಂಡು ತಿನ್ನತೊಡಗಿತು.

ನೀತಿ:- ದುಷ್ಟರನ್ನು ನಂಬಬಾರದು.

# ನರಿಯ ಕಪಟ ಬುದ್ಧಿ

ಅದೊಂದು ಸುಂದರವಾದ ಪ್ರಾಣಿಗಳ ರಾಜ್ಯ. ಆ ರಾಜ್ಯದ ಹೆಸರು ಅಖಂಡಪುರ. ಅಲ್ಲಿಯ ಪ್ರಾಣಿಗಳು ಪರಸ್ಪರ ಅನ್ಯೋನ್ಯವಾಗಿದ್ದವು. ಅಲ್ಲಿ ಮರ ಗಿಡಗಳೆಲ್ಲವೂ ಹಸಿರಿನಿಂದ ರಾರಾಜಿಸುತ್ತಿದ್ದವು. ರಾಜಸಿಂಘ ಎನ್ನುವ ಸಿಂಹವಿತ್ತು. ಅದು ನ್ಯಾಯ,ನೀತಿಯಿಂದ ರಾಜ್ಯಭಾರ ನಡೆಸುತ್ತಿತ್ತು. ಅಲ್ಲಿ ಇದುವರೆಗೆ ಬರಗಾಲ ಬರಲೇ ಇಲ್ಲ. ಹೀಗೆ ಅವರು ಮೂರು ತಿಂಗಳ ಬರಗಾಲ ಎದುರಿಸಬೇಕೆಂದು ಕಮಾಂಡೇಶ್ವರ ಶ್ರೀ ಮೊಲರಾಯ ಅವರು ಹೇಳಿತು. ಅಲ್ಲಿ ಹಾಗೇ ಆಯಿತು ನೋಡಿ! ಮರಗಳೆಲ್ಲಾ ಒಣಗಲು ಶುರುವಾದವು. ಎಲ್ಲರೂ ಆಹಾರವನ್ನು ಸಂಗ್ರಹಿಸಿದರು. ಆಹಾರವೆಲ್ಲಾ ಕೆಲವೇ ದಿನಗಳಲ್ಲಿ ಮುಗಿಯಿತು. ಮತ್ತೆ ಅವರು ಆಹಾರಕ್ಕಾಗಿ ಪೇಚಾಡಿದರು. ಆ ರಾಜನ ಮಂತ್ರಿ ಮಹಾ ಕಪಟ ನರಿ ಕಿಟ್ಟಪ್ಪ. ಅದು ಹಸಿವಿಲ್ಲದೆ ಜಂಭದಿಂದ ಮೆರೆಯುತ್ತಿತ್ತು. ಆಗ ಒಂದು ಬುದ್ಧಿವಂತ ಇಲಿಯು ಯೋಚಿಸಿತು,"ನಾವೆಲ್ಲಾ ಹಸಿವಿನಿಂದ ಬಳಲುತ್ತಿದ್ದೇವೆ. ಆದರೆ ನಮ್ಮ ಮಂತ್ರಿ ಮಹಾಶಯರು ಒಳ್ಳೆ ಆಹಾರ ತಿಂದು ದಪ್ಪ ಆಗಿದ್ದಾರೆ " ಎಂದು. ಆಗ ಇಲಿಯು, "ಇದರಲ್ಲಿ ಏನೋ ಮೋಸ ನಡೆಯುತ್ತಿದೆ " ಎಂದಿತು. ಒಂದು ದಿನ ಸೂರ್ಯೋದಯಕ್ಕಿಂತ ಮೊದಲು ಮಂತ್ರಿಗಳು ಹೋಗುವುದನ್ನು ಕಂಡಿತು. ಇಲಿ ಅದರ ಹಿಂದೆಯೇ ಹೋಯಿತು. ನರಿಯು ಆ ಕಾಡಿನ ಮೂಲೆಯಲ್ಲಿ ಒಂದು ಒಣಗಿದ ದೊಡ್ಡ ಮರದ



ಪೊಟರೆಯಿಂದ ಒಂದು ಪೆಟ್ಟಿಗೆ ತೆರೆಯಿತು. ಪೆಟ್ಟಿಗೆಯ ಮುಂದೆ ಕುಳಿತು ಅದು,"ಚಂದದ ಪೆಟ್ಟಿಗೆ, ಮುದ್ದಿನ ಪೆಟ್ಟಿಗೆ! ನನಗೆ ಒಂದು ಬಟ್ಟಲು ಆಹಾರ ಕೊಡು" ಎಂದಿತು. ಆಹಾರ ಗಬಗಬನೆ ತಿಂದಿತು. ಯಾಕೆಂದರೆ ಸೂರ್ಯೋದಯ ಆಗಿ ಯಾರಾದರೂ ನೋಡಿದರೆ ಎಂಬ ಭಯ. ಇಲಿಯು ಈ ಎಲ್ಲಾ ಮೋಸವನ್ನು ಕಂಡುಹಿಡಿದು, ನೇರವಾಗಿ ರಾಜನ ಬಳಿ ಹೋಗಿ ಹೇಳಿತು. ಅದರಿಂದ ರೋಷಗೊಂಡ ರಾಜ ಸಿಂಹ ಮಂತ್ರಿಯ ತಲೆಯನ್ನು ಬೋಳಿಸಿ ರಾಜ್ಯದಿಂದ ಗಡಿಪಾರು ಮಾಡಿತು. ಮಾತ್ರವಲ್ಲ ಅದರಿಂದ ಎಲ್ಲರು ಹೊಟ್ಟೆ ತುಂಬ ಊಟ ಮಾಡಿದರು.. ನಂತರ ಒಂದು ದಿನ ಕಾಡಿನ ವಾರ್ಷಿಕೋತ್ಸವದ ದಿನ ರಾಜ ಸಿಂಹ ಆ ಇಲಿಗೆ "ಪತ್ತೆದಾರ" ಎನ್ನುವ ಬಿರುದು ನೀಡಿ ಗೌರವಿಸಿದರು.

- ದೀಕ್ಷಾ

7 ಎ ತರಗತಿ

ಚಿಂತನೆ

# ಒಂದು ಹುಲ್ಲು ಕಡ್ಡಿಯ ಜೀವ್ರೋತ್ಸಾಹ

ಒಂದು ದಟ್ಟವಾದ ಕಾಡು ಅಲ್ಲೊಂದು ದೊಡ್ಡ ಮರ. ಅದರ ತುಂಬಾ ಹೂವುಗಳು. ಹೂವು ಕಾಯಿಗಳು.ಕೆಲವು ಉದುರಿದವು. ಇನ್ನು ಕೆಲವು ಬಲಿತು ಹಣ್ಣಾದವು. ಹಣ್ಣನ್ನು ಕೀಳದೆ ಹೋದರೆ ಏನಾಗುತ್ತದೆ ? ಒಣಗಿ ಚಿಪ್ಪೊಡೆದು ಬೀಜ ಗಳು ಬರುತ್ತವೆ. ಒಂದು ಹಣ್ಣಿನ ಚಿಪ್ಪು ಬಿರಿಯಿತು. ಒಣಗಿದ್ದ ಬೀಜಗಳಿಗೆ ಗಾಬರಿ ನೂರಾರು ಅಣ್ಣ – ತಮ್ಮಂದಿರು, ಅಕ್ಕ – ತಂಗಿಯಂದಿರಾದ ಬೀಜಗಳು ಒಳಗೆ ಬೆಚ್ಚನೆ ಪ್ರೀತಿಯಿಂದ ಕೂತಿವೆ ಹೊರಗೆ ಬಂದು ಗಾಳಿಗೆ ಸಿಲುಕಿದರೆ ಬೇರೆಯಾಗುವುದಿಲ್ಲವೇ ? ಆದರೆ ಪ್ರಕೃತಿ ನಿಯಮದಂತೆ ಚಿಪ್ಪೊಡೆಯಿತು. ದುರ್ದೈವವೋ ಎಂಬಂತೆ ಜೋರಾಗಿ ಗಾಳಿ ಬೀಸಿತು. ಒಂದು ಬೀಜ ಹಾರಿ ಅರ್ಧ ಮೈಲಿ ದೂರ ಹಾರಿ ಬಂತು. ಆದರೆ ಅದಕ್ಕೆ ಒಂದು ಹರ್ಷ.ತಾಯಿ ಬಳಿ ಅವಳ ನೆರಳಲ್ಲಿದ್ದೇನೆಂಬ ಖುಷಿ. ಇನ್ನೊಂದು ನಿರ್ಭಾಗ್ಯ ಬೀಜ ಹಾರಿ ಬಿರುಗಾಳಿಗೆ ಸಿಲುಕಿ ವಿಧಾನ ಸೌಧದ ಮುಂದೆ ಪಾದಾಚಾರಿಗಳ ಕಾಂಕ್ರೀಟ್ ರಸ್ತೆಯ ಮೇಲೆ ಬಿತ್ತು. ಪಾಪ! ಒದ್ದಾಡಿತು ಬೀಜ...ಒಂದು ಕರುಣಾಳು ಚಪ್ಪಲಿ ಬೀಜವನ್ನು ಮುಂದೆ ತಳ್ಳಿತು.ಎಲ್ಲಾ ಚಪ್ಪಲಿ ಬೂಟುಗಳ ತುಳಿತಕ್ಕೆ ಸಿಲುಕಿ ನಲುಗಿ ಹೋಯಿತು. ಕಾಂಕ್ರೀಟ್ ಪಟ್ಟಿಗಳ ನಡುವಿನ ಕೊರಕಲಿನಲ್ಲಿ ಬಿತ್ತು. ಅಬ್ಬಾ! ಒದ್ದಾಡಿ ಹೋಯಿತು. ತುಳಿತದಿಂದ ಪಾರಾದೆ



ಎಂದು ನಿಟ್ಟುಸಿರು ಬಿಟ್ಟಿತು. ಆದರೆ ಅದರ ಕಷ್ಟಗಳು ಪೂರ್ತಿ ಪರಿಹಾರವಾಗಲಿಲ್ಲ. ಯಾವ ಯಾವದೋ ಚಪ್ಪಲಿ ಬೂಟುಗಳು ಅದರ ಮುಖದ ಮೇಲೆ ಬೀಳುತ್ತಿತ್ತು. ಉಸಿರು ಬಿಗಿ ಹಿಡಿದು ಮೂರು ತಿಂಗಳು ಹೇಗೋ ತಡೆದು ಕೊಂಡಿತು. ಒಂದು ದಿನ ಸಣ್ಣನೆ ಮಳೆ ಬಂದಿತು. ಬೀಜದ ಮೇಲಿನ ಧೂಳು ತೊಳೆದು ಹೋಯಿತು. ಇಷ್ಟಾದ್ದರೂ ಬೀಜ ತಾನು ಮೊಳಕೆ ಒಡೆಯೂವುದು ಮರೆತಿರಲಿಲ್ಲ. ಅಷ್ಟು ಹಸಿ,ಸುತ್ತಲಿನ ಕೊಳಕು ಮಣ್ಣು ಸಾಕಾಯಿತು ಈ ಪುಟ್ಟ ಬೀಜಕ್ಕೆ. ತಪ್ತಿಯಿಂದ ತನ್ನ ಮೈ ಸೀಳಿಕೊಂಡು ಬೇರನ್ನು ಊರಿ ತಲೆ ಎತ್ತಿ ನಿಂತು ಕೊಂಡಿತು. ಎಲೆಗಳು ಕಾಂಕ್ರೀಟಿನ ಹಾಸಿಗೆಯ ನಡುವೆ ತಲೆ ಎತ್ತಿ ಜಗತ್ತು ನೋಡಿ ಕುಣಿದಾಡಿತು.

ನಾವೆಲ್ಲಾ ನೋಡುವುದಿಲ್ಲವೇ ಕಲ್ಲು ಸಂದುಗಳ ನಡುವೆ, ಹಳೆಯ ಗೋಡೆಗಳ ಕಿರಕಿನಲ್ಲಿ ಹುಲ್ಲು, ಬಳ್ಳಿ ಬೆಳೆದಿದನ್ನು ? ಅವುಗಳ ಬದುಕು ಎಷ್ಟು ದಿನ ? ಎಷ್ಟು ತಾಸು ? ಆದರೆ ಅವುಗಳ ಬದುಕಿನ ಉತ್ಸಾಹವನ್ನು ಗಮನಿಸಿರಿ.

ಒಂದು ಹುಲ್ಲು ಕಡ್ಡಿಗೆ ಒಂದು ಬಳ್ಳಿಗೆ , ಒಂದು ಹೂವಿಗೆ ಇರುವಷ್ಟು ಜೀವೋತ್ಸಾಹ ನಮಗೆ ಬೇಡವೆ ? ಸಣ್ಣ - ಪುಟ್ಟ ತೊಂದರೆಗಳಿಗೆ ಸೋಲುಗಳಿಗೆ ಮನಸ್ಸು ಮುದುರಿಸಿಕೊಂಡು ಕುಗ್ಗಿ ಹೋಗುತ್ತೇವೆ. ಸಣ್ಣ ಪರೀಕ್ಷೆಯಲ್ಲಿ ಸೋತು ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳನ್ನು ಕಂಡಾಗ ಕರುಳು ಬೆಂದು ಹೋಗುತ್ತದೆ. ನಮಗೆ ಆ ಹುಲ್ಲುಕಡ್ಡಿಯ ಜೀವೋತ್ಸಾಹ ಮಾದರಿಯಾಗಲಿ.

-ಪೂಜ.ಪಿ.

10 ಬಿ ತರಗತಿ

# ಮೋಹಿನಿಯಾಟ್ಟಂ

ಕೇರಳ ಮೂಲದ ಸಾಂಪ್ರದಾಯಿಕ ದಕ್ಷಿಣ ಭಾರತೀಯ ನೃತ್ಯ ಶೈಲಿ. ತಮಿಳು ಮೂಲದ ನಟ್ಟುವಾನರ (ನೃತ್ಯ ಗುರು) ಹಾಗೂ ತಂಜಾವೂರು ಚತುಷ್ಟಯರಲ್ಲಿ ಒಬ್ಬನಾದ ವಡಿವೇಲು, ಈ ನೃತ್ಯ ರೂಪವನ್ನು ಅಭಿವೃದ್ಧಿಗೊಳಿಸಿದರು. ಎಂಟು ಭಾರತೀಯ ಶಾಸ್ತ್ರೀಯ ನೃತ್ಯವಿದು. ಮೋಹಿನಿಯಾಟ್ಟಂ ಎಂಬ ಪದವು ,'ಮೋಹಿನಿ' (ನೋಡುಗರನ್ನು ಮರುಳಾಗಿಸುವ ಮಹಿಳೆ) ಹಾಗೂ 'ಆಟಂ' (ಸುಲಲಿತ ಹಾಗೂ ಅಪ್ಯಾಯಮಾನವಾದ ಶಾರೀರಿಕ ಚಲನವಲನಗಳು) ಎಂಬ ಎರಡು ಪದಗಳ ಸಂಯೋಗದಿಂದ ಮಾಡಿ ಬಂದಿದೆ. ಮೋಹಿನಿಯಾಟ್ಟಂ ಎಂಬುದು 'ಮೋಹಿನಿಯ ನೃತ್ಯ ' ಎಂದರ್ಥ ನೀಡುತ್ತದೆ. ಶ್ರೀ ವಿಷ್ಣು ಮೋಹಿನಿಯ ವೇಷದಲ್ಲಿದ್ದ ಬಗ್ಗೆ ಎರಡು ಕಥೆಗಳಿವೆ.



ಒಂದು ಕಥೆಯಲ್ಲಿ, ದೇವತೆಗಳು - ಅಸುರರು ಕ್ಷೀರಸಾಗರ ಮಥನ ಮಾಡಿ ಅಮೃತವನ್ನು ತೆಗೆದ ನಂತರ, ಅಸುರರನ್ನು ಅಮೃತದಿಂದ ದೂರವಿಡಲು ವಿಷ್ಣು ಮೋಹಿನಿಯ ವೇಷದಲ್ಲಿ ಗೋಚರಿಸುವುದು. ಎರಡನೇ ಕಥೆಯಲ್ಲಿ, ಭಸ್ಮಾಸುರನೆಂಬ ರಾಕ್ಷಸನಿಂದ ಶಿವನನ್ನು ರಕ್ಷಿಸಲು ವಿಷ್ಣು ಮೋಹಿನಿಯ ರೂಪದಲ್ಲಿ ಗೋಚರಿಸುವರು. ವಿಷ್ಣುವಿನ ಅವತಾರವನ್ನು ಮೂಲವಾಗಿಟ್ಟು ಕೊಂಡು ಮೋಹಿನಿಯಾಟ್ಟಂ ಎಂಬ ಹೆಸರು ಬಳಕೆಯಾಗಿದ್ದರೂ, ವಿಷ್ಣು ಅಥವಾ ಕೃಷ್ಣ ದೇವರನ್ನು ನೆಚ್ಚಿ ನಮನ ಸಲ್ಲಿಸುವುದು ಈ

ನೃತ್ತದ ಧ್ಯೇಯವಾಗಿದೆ. ದೇವದಾಸಿಗಳು ದೇವಾಲಯಗಳಲ್ಲಿ ಈ ನೃತ್ತ ಮಾಡುತ್ತಿದ್ದರು. ಆದರೂ ಈ ನೃತ್ತದಲ್ಲಿ ಕೂತು ಮತ್ತು ಕೊಟ್ಟಿಯಾಟ್ಟಂನ ಅಂಶಗಳಿವೆ. ಮೋಹಿನಿಯಾಟ್ಟಂ ಎಂಬುದು ನೃತ್ತ ಮತ್ತು ಪದ್ಯ – ಪಂಕ್ತಿಗಳುಳ್ಳ ನಾಟಕ.

-ದೀಕ್ಷಾ.ಯಂ.ಜೆ.

10 ಬಿ ತರಗತಿ

## ಸ್ಥಳ ಪರಿಚಯ

# ವಯನಾಡಿನ ಸೌಂದರ್ಯ

ವಯನಾಡು ಕೇರಳದ ಹದಿನಾಲ್ಕು ಜಿಲ್ಲೆಗಳಲ್ಲಿ ಒಂದು. ಹಲವಾರು ಕಾರಣಗಳಿಂದ ಈ ಜಿಲ್ಲೆ ಬಹಳ ವಿಶೇಷವಾದುದು. ಅಲ್ಲಿಗೆ ತಲುಪಬೇಕಾದರೆ ಘಟ್ಟ ಪ್ರದೇಶದಲ್ಲಿ ಹಾವಿನಂತೆ ಸಾಗುವ ಏರು ಹಾದಿಯಲ್ಲಿ ಪ್ರಯಾಣ ಮಾಡ ಬೇಕು. ಬೀಸುವ ಚಳಿಗಾಳಿ 'ವಯನಾಡು ತಲುಪಿತು' ಎಂದು ತಿಳಿಸುತ್ತದೆ.



ಸಹ್ಯಾದ್ರಿ ಪರ್ವತ ಸಾಲುಗಳ ಬಳಿಯಲ್ಲಿ ವಯನಾಡು ಜಿಲ್ಲೆಯಿದೆ. ಕೃಷಿ, ಕೈಗಾರಿಕೆ, ಕಲೆ, ಕಾಫಿ, ಏಲಕ್ಕಿ, ರಬ್ಬರ್ ಮೊದಲಾದವುಗಳೇ ಇಲ್ಲಿನ ಪ್ರಧಾನ ಕೃಷಿಗಳು. ಐನ್ನೂರ ನಲುವತ್ತನಾಲ್ಕು ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಆವರಿಸಿಕೊಂಡಿರುವ ಅರಣ್ಯ ಪ್ರದೇಶ ಈ ಜಿಲ್ಲೆಯಲ್ಲಿದೆ. ಇದು ಒಳ್ಳೆಯ ಒಂದು

ಪ್ರವಾಸೀ ತಾಣವೂ ಹೌದು. ಸುಲ್ತಾನ್ ಬತ್ತೇರಿ ಎಂಬಲ್ಲಿ ಹಳೆಯ ಕಾಲದ ಜೈನ ಬಸದಿಯ ಅವಶೇಷಗಳು ಇವೆ. ಅದರ ಸಮೀಪತಲ್ಲಿರುವ ಅಂಬುಕುತ್ತಿಮರೆ ಎಂಬಲ್ಲಿ ಪುರಾತನವಾದ ಎರಡು ಗುಹೆಗಳಿಗೆ "ತಲ್ಪಟ್ಟ"ವು ವಯನಾಡಿನ ಜಿಲ್ಲಾ ಕೇಂದ್ರವಾಗಿದೆ. ವೀರ ರಾಷ್ಟ್ರಪ್ರೇಮಿ ಪಳಶ್ಶಿ ರಾಜನು ಬ್ರಿಟೀಷರ ಎದುರು ವೀರಾವೇಶದಿಂದ ಹೋರಾಡಿದವನು, ವಯನಾಡಿನ ರಕ್ಷಣೆಗೆ ವಿಶೇಷವಾದ ಯುದ್ಧ ರೀತಿಯನ್ನೇ ಅನುಸರಿಸಿದನು. ಅವನ ಒಂದು ಸ್ಮಾರಕವು ಮಾನಂದವಾಡಿಯಲ್ಲಿದೆ. ಮತ್ತಙ್ಙ ಎಂಬಲ್ಲಿ ವನ್ಯಮಗ ಸಂರಕ್ಷಣಾ ಕೇಂದ್ರವು ಇದೆ. ತಿರುನೆಲ್ಲಿಯಲ್ಲಿ "ದಕ್ಷಿಣ ಕಾಶಿ" ಎಂದು ಕರೆಯಲ್ಪಡುವ ದೇವಾಲಯವೂ, ಹತ್ತಿರದಲ್ಲಿರುವ ಪಕ್ಷಿಧಾಮವು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ. ಇಲ್ಲಿ ಹಲವಾರು ನದಿಗಳು ಹರಿಯುತ್ತವೆ. ಮೋಕ್ಷಪ್ರಾಪ್ತಿ ಯಾಗುವ ಕ್ಷೇತ್ರವೆಂದು ತಿಳಿಯಲ್ಪಡುವುದರಿಂದ ಇಲ್ಲಿ ದಿನವೂ ನೂರಾರು ತೀರ್ಥಾಟಕರು ಬಂದು ಪಿತೃಶ್ರಾದ್ಧವನ್ನು ಮಾಡುತ್ತಾರೆ.



ತಿರುನೆಲ್ಲಿ ಬೆಟ್ಟದ ತಪ್ಪಲಲ್ಲಿ ಮುಂದುವರಿದರೆ ಪಕ್ಷಿಪಾತಾಳಕ್ಕೆ ತಲುಪಬಹುದು. ಕನ್ನಡದ ಪ್ರಸಿದ್ಧ ಚಲನಚಿತ್ರವಾದ "ಎಡಕ್ಕಲ್ಲು ಗುಡ್ಡದ

ಮೇಲೆ" ಎಂಬುದು ಚಿತ್ರೀಕರಣಗೊಂಡ ಎಡಕ್ಕಲ್ಲು ಗುಡ್ಡೆಯೂ ಗುಹೆಯೂ ವಯನಾಡಿನಲ್ಲಿ ಇದೆ. ಕಾಲ್ನಡಿಗೆಯಿಂದ 4-5 ಮೈಲಿಗಳಷ್ಟು ಮೇಲಕ್ಕೆ ತಲುಪಿದಾಗ ಒಂದು ಸುಂದರಸರೋವರ ಕಾಣಸಿಗುವುದು. ಹೃದಯದ ಆಕೃತಿಯಲ್ಲಿರುವ ಮತ್ತು ಎಂದೂ ಬತ್ತದ ಈ ತಟಾಕಕ್ಕೆ " ಹೃದಯ ತಟಾಕ " ವೆಂಬ ಹೆಸರು ಅನ್ವರ್ಥವಾಗಿದೆ. ಸಮುದ್ರ ಮಟ್ಟದಿಂದ ಐದುಸಾವಿರದ ಇನ್ನೂರ ಎಪ್ಪತ್ತಾರು ಅಡಿ ಎತ್ತರದಲ್ಲಿ ಇಲ್ಲಿನ ಬ್ರಹ್ಮಗಿರಿ ಬೆಟ್ಟವು ಇದೆ.

- ತೃಷಾ ರೈ ಯಂ

9 ಸಿ ತರಗತಿ

# ನಾನೂ ಹಾರಬೇಡವೇ ?

" ಈ ಜಗವೇ ಸುಂದರ. ಏನಿಲ್ಲ ಈ ಜಗದಲ್ಲಿ ! ತಾಯಿಯ ಮಮತೆ, ತಂದೆಯ ವಾತ್ಸಲ್ಯ, ಅಕ್ಕ ತಂಗಿಯರ ಪ್ರೀತಿ, ಗೆಳೆಯರ ಸ್ನೇಹ ಸೌಹಾರ್ದ! ಈ ಜಗದ ಕರ್ತೃವೇ ನಿನಗಿದೋ ವಂದನೆ. ಆದರೆ ಇದೆಲ್ಲವನ್ನೂ ನೀ ನನಗೆ ಕರುಣಿಸಿರುತ್ತಿದ್ದರೆ ನಾನೂ ಎಲ್ಲರಲ್ಲಿಯೂ ಒಬ್ಬಳಾಗಿರುತ್ತಿದ್ದೆ. ಏಕೆ ಹೀಗೆ...? ನಾನೂ ಈ ಜಗದ ಭಾಗವಲ್ಲವೇ ? ನನ್ನನ್ನೇಕೆ ದೂಷಿಸುವರೋ ನೀನೇ ಬಲ್ಲೆ ಭಗವಂತ. ನನ್ನ ಪತಿಯ ಮರಣಕ್ಕೆ ನಾನೇ ಕಾರಣಳೇ ? ನಾನು ಕಾಲಿಟ್ಟ ಘಳಿಗೆ ಚೆನ್ನಾಗಿಲ್ಲವೇ? ಗಂಡನ ಮನೆಯವರೊಂದಿಗೆ ಬೆರೆಯಲೆನ್ನ ಬಿಡುತ್ತಿಲ್ಲ. ಹೆತ್ತವರು ಕೊಟ್ಟ ಕೂಸಿಗೆ ದೂರವಾಗಿ ಹೋದರು. ಸೀತೆಯಂತೆ ಅಗ್ನಿಪರೀಕ್ಷೆ ಗೆಲ್ಲಲು ನನಗೆ ಶಕ್ತಿಯಿದೆಯೇ? ಎಂದು ನಾನು ಅಂದು ಯೋಚಿಸಿದ್ದೆ. ಆದರೆ ಅದಕ್ಕೆ ಉತ್ತರವಾಗಿ ನಾನಿಂದು ನಿಮ್ಮ ಮುಂದೆ ನಿಂತಿದ್ದೇನೆ..."

" ಅಂದು ನಾನು ಗೋಳೋ ಎಂದು ಅಳುತ್ತಿದ್ದೆ. ಯಾರೊಬ್ಬರೂ ನನ್ನ ನೆರವಿಗೆ ಬರಲಿಲ್ಲ. ಏಕೆಂದು ನಾ ಕಾಣೆ. ಏನೆಂದು ಕೇಳಿದರೆ,' ನೀನು ವಿಧವೆ.' ಎಂದು ಹೇಳಿ ನಿಂದಿಸಿದರು. ನಿಜವಾದ ತಾತ್ಪರ್ಯ ನಾನು ಅರಿತಿರಲಿಲ್ಲ. ಹದಿನೈದರ ಹುಡಿಗೆಗೆ ಅದು ತಿಳಿಯದೇ ಇರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ! ಹೇಗೆ ವಿವರಿಸಲಿ ನಾ ಈ ನೋವ. ಬಿಸಿ ತುಪ್ಪವ ಬಾಯಿಯಲ್ಲಿಟ್ಟಿದ್ದೆ. ನುಂಗಲೂ ಆಗದೆ.... ಉಗುಳಲೂ ಆಗದೆ. 'ಪಾಪದ ಹುಡುಗಿ' ಎಂದು ನಾಲ್ಕೆಡೆ ಕೇಳಿ ಬಂದರೂ, 'ಬಾ ಮಗಳೆ' ಎಂಬ ಸಾಂತ್ವನದ ದನಿ ನನ್ನ ಕಿವಿಗೆ ಮುಟ್ಟಿರಲಿಲ್ಲ. ಆದರೆ ನನಗೆ ನನ್ನ ಮನವೆ ಸಾಂತ್ವನ ಹೇಳಿತ್ತು. ಹೇಗೆ ಗೊತ್ತೇ?! ನನ್ನ ಗೆಳತಿಯರೆಲ್ಲಾ ಮೈದಾನದಲ್ಲಿದ್ದರು. ಕಾಲ್ಚೆಂಡಿನೊಂದಿಗಿದ್ದರು. ಅದು ನೋಡಿದಂತೆ ಮನ

ಕುಪ್ಪಳಿಸಿತು. ರೆಕ್ಕೆಬಂದು ಗಗನದತ್ತ ಹಾರುತ್ತಿರುವ ಭಾವ. ಇಲ್ಲಿ ಹೆಂಗಳೆಯರೆಲ್ಲಾ ಸೇರಿ ನನ್ನ ಬಳೆ ಒಡೆದರೂ, ಕತ್ತಿನಲ್ಲಿ ಅವನ್ಯಾರೋ ಕಟ್ಟಿದ ಮಾಂಗಲ್ಯವನ್ನು ಕಿತ್ತರೂ, ಬಿಳಿ ಸೀರೆ ಉಡಲು ಒತ್ತಾಯಿಸಿದರೂ ನಾನಂತು ನಿಶ್ಚಲಳಾಗಿದ್ದೆ. ಇವರ ಕಾರ್ಯ ಮುಗಿಯುತ್ತಿದ್ದಂತೆ ನಾನು ಮೈದಾನದತ್ತ ಧಾವಿಸಿದೆ. 'ಲೋ ನಂಗೂ ಕೊಡೋ ಚೆಂಡು' ಎಂದು ಕೇಳಿದ್ದೇ ತಡ ಅಜ್ಜ ನಾಗರ ಬೆತ್ತದಿಂದ ಬೆನ್ನಿಗೆ ಬರೆಯನ್ನೇ ಎಳೆದು ಬಿಟ್ಟರು. ನೋವಾಯಿತು. ಬೆನ್ನಿಗೆ ಮಾತ್ರ ವಲ್ಲ..... ಪುಟ್ಟ ಸಂಧಿಯಲ್ಲಿ ಅವಿತಿದ್ದ ಹೃದಯಕ್ಕೂ......

ಅಲ್ಲಿಂದ ಶುರುವಾಯಿತು, ನನ್ನ ಜೀವನದ ಅಸಲಿ ಕಥೆ, ವ್ಯಥೆ. ಬಿಳಿ ಸೀರೆ ಮಾತ್ರ ನನ್ನ ಉಡುಗೆಯಾಗಿತ್ತು. ಎಲ್ಲಾ ಗೆಳತಿಯರು ಜಾತ್ರೆಯಲ್ಲಿ ರಂಗುರಂಗಿನ ಉಡುಪು ಧರಿಸಿ ಓಡಾಡುತ್ತಿದ್ದರೂ ನನ್ನ ಈ ಬಿಳಿ ಸೀರೆಯಲ್ಲಿ ಬಂಧಿಸಿದರು..... 'ಯಾಕ್ ಅಜ್ಜಯ್ಯಾ ನನ್ನ ಕೂಡ್ ಹಾಕಿದ್ದೀರಾ' ಎಂದೆ. "ಯಾಕ ಅಂದ್ರೆ ನೀನ್ ವಿಧವೆ ಅದೀಯ, ಮಂಗಳಕಾರ್ಯಗಳ್ಗೆ ಹೋದ್ರೆ ಕೆಟ್ಟದಾಗುತ್ತೆ ನೋಡು." "ಅದ್ದೇಗೆ ?" ಎಂದು ಕೇಳುವ ಬಯಕೆ. ಆದರೆ ಬೆನ್ನಲ್ಲಿ ಬಿದ್ದ ಬರೆ ಇನ್ನೂ ಮಾಸಿರಲಿಲ್ಲ. ದಿನವೂ ದುರ್ಗಂಧ ಈ ಕೊಠಡಿಯೇ ಎಂದು ಹುಬ್ಬೇರಿಸಿದೆ. ಆದರೆ ನನ್ನೊಳಗೆ ಲೀನವಾಗಿ , ನನ್ನಂತರಾಳವನ್ನು ನೋಡಲು ಯಾರೂ ತಯಾರಿರಲಿಲ್ಲ. ಆಗ ನೆನಪಾಯಿತು ನೋಡಿ, ನನ್ನ ಶಾಲೆಯಲ್ಲಿ ನಡೆದ ಓಟದ ಸ್ಪರ್ಧೆ. ನಾನು ಎಷ್ಟು ಚೆನ್ನಾಗಿ ಓಡುತ್ತಿದ್ದೆ. ಆಗಲೇ ತೋರಿತು, ನಾನು ಮ್ಯಾರಥಾನ್ನಲ್ಲಿ ಓಡಿ ಭಾರತಕ್ಕೆ ಚಿನ್ನ ತಂದು ಕೊಡಬೇಕೆಂದು. ಆದರೆ ಯಾರನ್ನೋ ಕರೆದರು, ನನಗೆ ಅಲಂಕಾರ ಮಾಡಿದರು, ತಾಳಿಕಟ್ಟಿಸಿದರು. ಮದುವೆ ಆಯಿತು ಎಂದು ಹಿರಿಯರು ಆಶೀರ್ವದಿಸಿದರು. ಅದು ಮದುವೆ ಆಗಿರಲಿಲ್ಲ. ನನ್ನ ಕನಸಿನ ರೆಕ್ಕೆಗಳನ್ನು ತುಂಡರಿಸಲು ನಡೆಸಿದ ಒಂದು ಆಡಂಬರವಾಗಿತ್ತು. ಮದುವೆಯಾದ

ನಂತರ ನನ್ನನ್ನು ಶಾಲೆಗೆ ಕಳುಹಿಸಲಿಲ್ಲ. ಅಂದು ನನ್ನ ಕಣ್ಣಿನಿಂದ ಬಂದ ಅಶ್ರು ನನ್ನ ಜೀವನಕ್ಕೆ ದಾರಿಯಾಗಿತ್ತು. ಆದರೆ ನನಗೆ ತಾಳಿ ಕಟ್ಟಿದವ ಮೂರೇ ತಿಂಗಳಿಗೆ ಸತ್ತದ್ದು ನೆನೆಸಿ ಬೆಟ್ಟದಷ್ಟು ಸಂತೋಷವಾಗಿತ್ತು. ಆದರೆ ಆ ಸಂತೋಷ ಕ್ಷಣಿಕವಾಗಿತ್ತು. ಹೇಗೆ ಹೇಳಲಿ ನಾ ? ಎಲ್ಲಾ ವಿಧಿಯ ನಾಟಕ. ನನ್ನ ಮನದಲ್ಲಿಯೂ ಸೂತಕದ ಛಾಯೆ. ಬಾಳೂ ವ್ಯರ್ಥ ಎಂದುಕೊಂಡಿದ್ದೆ. ಆದರೆ ನನ್ನ ಓಟಗಾರ್ತಿಯಾಗುವ ಕನಸು ನನ್ನನ್ನು ಸುಮ್ಮನೆ ಬಿಡಲಿಲ್ಲ. ಬಿಸಿನೀರು ತಂದು ಹೊಯ್ಯುವಾಗಲೂ, ಬೇರೆ ಕೆಲಸ ಮಾಡುತ್ತಿದ್ದರೂ ವೇಗವಾಗಿ ಓಡಿಕೊಂಡು ಮಾಡುತ್ತಿದ್ದೆ. ಇದನ್ನು ನೋಡಿ ಕೆಲವರು ಗೊಣಗಿದರು, " ಪಾಪ, ಗಂಡ ಸತ್ತ ಮೇಲೆ ಅರೆಹುಚ್ಚಿ ಆಗೋಗ್ಯಾಳೆ . ಆದರೂ ನಾ ಕಿವಿಗೊಡಲಿಲ್ಲ. ಆದರೆ ಸೆರೆಮನೆ ವಾಸವನ್ನು ಅಜ್ಜಯ್ಯ ಆದೇಶಿಸಿದಾಗ ನನ್ನ ಕನಸು ಎದ್ದು ನನ್ನ ಅಭಿಮಾನವನ್ನು ತಟ್ಟಿತು. ಹೇಗಾದರೂ ಮಾಡಿ ಓಡಿ ಹೋಗಬೇಕೆಂದು ಶತಪ್ರಯತ್ನ ಮಾಡಿದೆನು. ಪ್ರತಿಸಲವೂ ನಿರಾಸೆ. ಆದರೆ ನನ್ನ ಕನಸು ಇನ್ನೂ ಜೀವಂತವಾಗಿತ್ತು. ಮತ್ತೆಯೂ ಪ್ರಯತ್ನ ಮಾಡುತ್ತಲೇ ಇದ್ದೆ. ಒಮ್ಮೆ ಕಿಟಿಕಿಯಿಂದಾದರೆ, ಇನ್ನೊಮ್ಮೆ ಬಚ್ಚಲಿನ ಬಾಗಿಲಿನಿಂದ. ಆದರೂ ಅರಣ್ಯರೋದನದಂತಾಯಿತು. ಅಜ್ಜಯ್ಯ ಕೊಡುತ್ತಿದ್ದ ಶಿಕ್ಷೆಯಂತೂ ತಡೆಯಲು ಅಸಾಧ್ಯ. ಆದರೂ ಗಟ್ಟಿ ಉಗುಳನ್ನು ನುಂಗಿಕೊಂಡು, ಈ ಜಾತ್ರೆಯಲ್ಲಿ ಓಡಿ ಬಿಡಬೇಕೆಂಬ ಗಟ್ಟಿ ಮನಸ್ಸು ಮಾಡಿಯೇ ಬಿಟ್ಟೆ. ಅದರಂತೆ ಓಡಿ ಹೋದೆ. ಎಷ್ಟು ಸಂದಿಗ್ಧತೆಯಲ್ಲಿ ಗೊತ್ತೇ ?

ಮನೆಯವರೆಲ್ಲಾ ಊರ ಜಾತ್ರೆಯ ಸಂಭ್ರಮದಲ್ಲಿದ್ದರು. ಯಾರ ಕಣ್ಣಿಗೂ ಬೀಳದಂತೆ ನಾ ಓಡಿ ಹೋದೆನು, ಹಿಂಬಾಗಿಲಿನಿಂದ. ಪಂಜರದ ಒಳಗಿನಿಂದ ಬಿಡುಗಡೆಯಾದ ಗಿಣಿಯಂತಾದೆ ನಾನು. ಹಾರಾಡುತ್ತಾ ಹಾರಾಡುತ್ತಾ ಹೋದೆ. ಆದರೆ ದಿಕ್ಕಿಲ್ಲ, ದೆಸೆಯಿಲ್ಲ. ಎಲ್ಲಿಗೆಂದು ಹೋಗಲಿ ? ಯಾರನ್ನ ಕರೆಯಲಿ ?

ಒಂದೂ ತಿಳಿಯಲಿಲ್ಲ. ಹಾರಾಡುವ ಗಿಣಿಗೆ ಗಿಡುಗನ ಭಯವೂ ಇರಬೇಕೆಂದು ಮನಸ್ಸು ತಟ್ಟತಟ್ಟನುಡಿಯಿತು. ಆದರೂ ಧೈರ್ಯ ಮಾಡಿ ಬೆಂಗ್ಳೂರ್ ಬಸ್ಸು ಹತ್ತಿಯೇ ಬಿಟ್ಟೆ. ಆ ಕಂಡಕ್ಟರ್ ಹಣವಿಲ್ಲದ ಕಾರಣ ದುರುಗುಟ್ಟಿನೋಡಿದನು. ಆದರೂ ಕಾಲಿಗೆ ಬಿದ್ದು ಬೆಂಗ್ಳೂರ್ ಮುಟ್ಟಿಸುವಂತೆ ಬೇಡಿದೆನು. ಪಾಪ ಅವನ ಮಗಳ ನೆನಪಾಯಿತೋ ಏನೋ! ಸೀಟೇ ಕೊಟ್ಟು ಬಿಟ್ಟ. ಹಾಗೂ ಹೀಗೂ ಬೆಂಗ್ಳೂರಿಗೆಬಂದೆ. ಅಲ್ಲಿಂದ ನನ್ನ ಜೀವನದ ಹೊಸ ಅಧ್ಯಾಯ.......

" ಸುಧರ್ಮ " ಅನಾಥರಿಗಾಗಿದ್ದ ಒಂದು ಆಶ್ರಮ. ಹಲವಾರು ಜನ ಅನಾಥರಿದ್ದರು, ನನ್ನಂಥೆಯೇ. ಆದರೆ ಅವರು ಯಾರೂ ಇಲ್ಲದೆ ಅನಾಥರಾಗಿದ್ದರು. ನಾನು ಎಲ್ಲರೂ ಇದ್ದೂ ಯಾರೂ ಇಲ್ಲದವಳಂತೆ ಆಶ್ರಮ ಪ್ರವೇಶಿಸಿದೆ. ನನ್ನ ಬಾಳಿಗೆ ಅಲ್ಲಿಯವರೇ ಬಂಧುಗಳಾದರು, ದಾರಿದೀಪವದರು. ನಾನು ಇಲ್ಲಿಗೆಬಂದಿರಲು ಸಾಥ್ ನೀಡಿದ್ದೇ ಈ "ಸುಧರ್ಮ". ನಾನೆಂದಿಗೂ ಈ ಸಂಸ್ಥೆಗೆ ಚಿರಋಣಿ. ಇಂತಹ ಬಹಳಷ್ಟು ಜನರ ಜೀವನವನ್ನೇ ಬದಲಾಯಿಸುವ ಹಲವಾರು ಸಂಸ್ಥೆಗಳು ಈ ನಾಡಿನಲ್ಲಿವೆ. ಅದಕ್ಕಾಗಿ ಬಹಳ ಸಂತೋಷ ಪಡುತ್ತಿದ್ದೇನೆ. ನೀವೂ ಮನಸು ಮಾಡಿದರೆ ಎಲ್ಲಿಗೆ ಬೇಕಾದರೂ ತಲುಪುವಿರಿ.



"ಸುಧರ್ಮ" ನೀಡಿದ ತರಬೇತಿ ಇಂದು ನನ್ನ ಕೈಗೆ ಚಿನ್ನ ತಂದುಕೊಟ್ಟಿದೆ. ಮ್ಯಾರಥಾನ್ ವಿಜೇತೆಯಾಗಿ ನಿಮ್ಮ ಮುಂದೆ ನಾನು ನಿಂತಿದ್ದೇನೆ. ಅಂದು ನಾನು ನನ್ನ ಕನಸುಗಳಿಗಾಗಿ, ಮನಸ್ಸು ಗಟ್ಟಿಮಾಡಿ ಓಡದೇ ಇರುತ್ತಿದ್ದರೆ, ಇಂದೂ ನಾನದೇ ಕತ್ತಲೆ ಕೋಣೆಯಲ್ಲಿ ಎಲೆಮರೆ ಕಾಯಿಯಾಗಿ

ಹೋಗುತ್ತಿದ್ದೆ. ಇಂದು ನಾನು ಈ ಮಾತುಗಳನ್ನ ಯಾಕೆ ಹೇಳುತ್ತಿದ್ದೇನೆ ಗೊತ್ತೇ? ಸಮಾಜದಲ್ಲಿ ಅಂಟಿರುವ ದೊಡ್ಡ ಕಳಂಕ "ಬಾಲ್ಯವಿವಾಹ". ನನ್ನಂತಹ ಎಷ್ಟೋ ಮುಗ್ಧೆಯರು

ಬಲಿಯಾಗುತ್ತಿದ್ದಾರೆ ಇದಕ್ಕೆ.. ಅದನ್ನು ತಡೆಯಲು ಹಾಗೂ ಅವರ ಜೀವನಕ್ಕೂ ಒಂದು ಆಶಾಕಿರಣ ದೊರೆಯಲಿ ಎಂದು. ಯಾರಿಗೆ ಗೊತ್ತು? ಮುಂದೊಂದಿನ ಎಲ್ಲಾ ಬಾಲೆಯರು ತಮ್ಮ ಆಸೆ ಆಕಾಂಕ್ಷೆಗಳನ್ನು ಸಾಕಾರಗೊಳಿಸಿದರೂ ಗೊಳಿಸಬಹುದು." ಮ್ಯಾರಥಾನ್ ವಿಜೇತೆ ಸುನೀತ ಭಾಷಣವನ್ನು ಕೊನೆಗೊಳಿಸುತ್ತಾರೆ. ಆಗಲೇ ಪುಟ್ಟ ಬಾಲಕಿ ಚುಕ್ಕಿ ಕೇಳುತ್ತಾಳೆ, "ನೀವು ಇಷ್ಟೆಲ್ಲಾ ಕಷ್ಟಪಟ್ಟಿರಲ್ಲಾ, ಇಂದು ನೀವು ಚಿನ್ನ ಗೆದ್ದಿರಿ. ನಿಮ್ಮ ಹಾಗೆ ಚಿನ್ನ ಗೆಲ್ಲಲು ನಾನು ಮದ್ವೆಯಾಗಿ ಓಡಿ ಬರ್ಬೇಕಾ?" "ಹ್ಹ....ಹ್ಹ....ಚಿನ್ನಕ್ಕಿಂತ ಮೇಲೆ ಇನ್ನೆಂಥಾದರೂ ಇದ್ದರೆ, ಅದು ನಿನಗೆ ಕಂದ. ನೀನೇ ನವಭಾರತದ ಹೆಮ್ಮೆಯ ಕುವರಿಯಾಗಬೇಕು." ಎಂದು ಹೇಳಿದ ಸುನೀತ ಅಲ್ಲಿಂದ ನಿರ್ಗಮಿಸುತ್ತಾರೆ.

ಇವರಂತೆಯೇ ಹಲವರು ಕಷ್ಟಪಡುತ್ತಿದ್ದಾರೆ. ಹೀಗೆ ಬೆಂಕಿಯಲ್ಲಿ ಹೊಳೆದು ಬಂದ ಇವರೆಲ್ಲರೂ ಆದರ್ಶ ಬಾಳ್ವೆಗೆ ಒಂದು ಸುಂದರ ಉದಾಹರಣೆ. ಎಲ್ಲರ ಮನದಲ್ಲೂ ಇರಬೇಕಾದ್ದು ಇಷ್ಟೇ. ನನಗೂ ಹಾರಬೇಕು......

**ನೀತಿ :- ಮನಸ್ಸಿದ್ದರೆ ಮಾರ್ಗ**

- ಸೌಜನ್ಯ.ಬಿ

10 ನೇ ತರಗತಿ

# ನಿರ್ಮಲ ಪ್ರಕೃತಿಗಾಗಿ

ಪ್ರಕೃತಿ ಮಾತೆಯ ಮಡಿಲಿನಲಿ
ಸುಖದಲಿ ಜೀವಿಪೆವು |
ಆದರೆ ಆಕೆಗೆ ಅನುದಿನವೂ
ಕೇಡನೆ ಬಯಸಿಹೆವು ||

ಕ್ಷಣ ಕ್ಷಣಕೂ ಉರುಳುತಿದೆ
ಸಾಲು ಸಾಲು ವೃಕ್ಷಗಳು |
ಹಸಿರಿನ ಬೀಡಾಗಿಸಬೇಕು
ಪರಿಸರವನು ನಾವುಗಳು ||

ತುಂಬಿ ತುಳುಕುತಿದೆ ಮಾಲಿನ್ಯ
ಪ್ರಪಂಚದ ಎಲ್ಲೆಡೆ |
ಶುಚಿತ್ವ ಕಾಪಾಡಿ ನಡೆಯೋಣ
ಸ್ವಚ್ಛ ಜಗತ್ತಿನೆಡೆ ||



ದಿನೇ ದಿನೇ ಹೆಚ್ಚುತಲಿದೆ
ಜಾಗತಿಕ ತಾಪ |
ಕಡಿಮೆ ಮಾಡಲೇಬೇಕಿದೆ
ಪ್ರಕೃತಿ ವಿಕೋಪ ||

ಪ್ರಕೃತಿಯಿದ್ದರೆ ಮಾತ್ರ ನಾವೆಂಬುದನು

ಮಾಡಬೇಕಿದೆ ಮನನ |

ನಿರ್ಮಲ ಪ್ರಕೃತಿಗಾಗಿ ಶ್ರಮಿಸಿದರೆ ಮಾತ್ರ

ಖುಷಿಯಿಂದಿರುವೆವು ಅನುದಿನ ||

**-ಶ್ರೀ ದೇವಿ.ಪಿ.**

**೮ ಬಿ**

# ಕೇರಳದ ದುರಂತ

ಯಾರ ಶಾಪವೊ ಈ ನಾಡಿಗೆ ತಾಗಿತು

ಸೂಚನೆ ಕೊಡದೆ ಮಳೆಯು ಬಂದಿತು |

ಹಲವು ಸಹಸ್ರರ ಕಣ್ಣೀರಿಗೆ ಕಾರಣವಾಯಿತು

ನೋಡ ನೋಡುತ್ತಾ ಇಡೀ ಕೇರಳವೇ ಕೊಚ್ಚಿಹೋಯಿತು ||

- ಶಿಲ್ಪ. ಕೆ .

9 ಬಿ ತರಗತಿ



# ರಾಣಿ ಲಕ್ಷ್ಮೀಬಾಯಿ

೧೮ ರ ಹರೆಯ ಎಳೆಯ ವಯಸ್ಸಿನಲ್ಲಿಯೇ ರಾಣಿ ಲಕ್ಷ್ಮೀ ಬಾಯಿ ವಿಧವಾ ಪಟ್ಟವನ್ನೇರಿದಳು. ಮುಂದೆ ದೇಶ ಸೇವೆಗೈಯುತ್ತಲೇ ತಾರುಣ್ಯದ ೨೨ ರ ಹೊಸ್ತಿಲಲ್ಲಿ ಹುತಾತ್ಮಳಾದಳು.

೧೮೩೫ ನವೆಂಬರ್ ೧೯ ರಂದು ಜನಿಸಿದ ಲಕ್ಷ್ಮೀ ಬಾಯಿ,ತಂದೆ - ತಾಯಿಗಳ ಅಚ್ಚುಮೆಚ್ಚಿನ ಕುವರಿಯಾಗಿದ್ದಳು. ಇನ್ನೂ ತರುಣ್ಯಾವಸ್ಥೆಯಲ್ಲಿರುವಾಗಲೇ ತನ್ನ ತಾಯಿಯನ್ನು ಕಳೆದುಕೊಂಡಳು.

ಎಲ್ಲರಂತೆ ಶಿಕ್ಷಣ ಪಡೆಯುತ್ತಲೆ ಅದರೊಂದಿಗೆ ಕುದುರೆ ಸವಾರಿ, ಆಯುಧಗಳ ಹೊಡೆದಾಟ, ಶೂಟಿಂಗ್ ಇನ್ನಿತರ ಯುದ್ಧ ಕಲೆಗಳಲ್ಲಿ ಚೆನ್ನಾಗಿ ತರಬೇತಿ ಪಡೆದಳು. ಈ ವಿದ್ಯೆಗಳಲ್ಲಿ ಅವಳಿಗೆ ಅಪಾರ ಕೌಶಲ್ಯವಿತ್ತು. ಅದರಲ್ಲಿ ಚೆನ್ನಾಗಿ ಪಳಗಿದ್ದರು. ಚಿಕ್ಕಂದಿನಲ್ಲಿ ಮನು ಎಂದೇ ಹೆಸರಾದಳು. ಇವಳು ಝೂನ್ಸಿಯ ಮಹಾರಾಜರೊಂದಿಗೆ ೧೮೪೨ ರಲ್ಲಿ ವಿವಾಹವಾದಳು.

ಈ ಸಮಯದಲ್ಲಿ ಜನರಲ್ ಡಾಲ್ ಹೌಸಿಯು,ಒಂದು ನಿಯಮವನ್ನು ಹೊರಡಿಸಿ, ನೈಜವಾಗಿ ಸಹಜ ವಾರಸುದಾರರು ಇಲ್ಲದೆ ಹೋದಲ್ಲಿ, ಅಂಥ ರಾಜ್ಯವು ಬ್ರಿಟೀಷರ ಸೊತ್ತಾಗುವುದು ಎಂದು ಪ್ರಕಟಿಸಿದನು.ಝೂನ್ಸಿಯ ಮಹಾರಾಜರಿಗೆ ನೈಜ ವಾರಸುದಾರರು ಇರಲಿಲ್ಲ. ಆದ್ದರಿಂದ ಅವರು ೧೮೫೩ ರಲ್ಲಿ ಒಬ್ಬ ಮಗನನ್ನು ದತ್ತು ಪಡೆದುಕೊಂಡರು. ಅವನಿಗೆ ದಾಮೋದರ ರಾವ್ ಎಂದು ನಾಮಕರಣ ಮಾಡಿದರು.ಇದರ ನಂತರ ಸ್ವಲ್ಪವೇ ಸಮಯದಲ್ಲಿ ಮಹಾರಾಜನು ತೀರಿಕೊಂಡನು. ಬ್ರಿಟೀಷರು ದತ್ತು ಕ್ರಮವನ್ನು ಒಪ್ಪದೇ

ಹೋದರು. ಅಂತೆಯೇ ಅವರು ಝಾನ್ಸಿಯನ್ನು ತಮ್ಮ ಸ್ವಾಧೀನಕ್ಕೆ ಪಡೆಯಲು ಹವಣಿಸಿದರು. ರಾಣಿಯು ಎಷ್ಟೇ ಪ್ರತಿರೋಧ ಮಾಡಿದರೂ, ಬ್ರಿಟೀಷರು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಉಪಾಯವಿಲ್ಲದೇ ರಾಣಿಯು ಬ್ರಿಟೀಷರಿಗೆ ತಿರುಗಿ ಬಿದ್ದಳು.ಮುಂದೆ ರಾಣಿಯು ಪಾರಾಗಿ ಮರಾಠ ರಾಜ್ಯವನ್ನು ಸೇರಿದಳು. ಅದನ್ನು ರಾವ್ ಸಾಹೇಬ ಎನ್ನುವವನು ಆಳುತ್ತಿದ್ದನು. ಲಕ್ಷ್ಮೀ ಬಾಯಿಯ ಮಾರ್ಗದರ್ಶನದ ಮೇರೆಗೆ ಮರಾಠ ಸೈನಿಕರು ಗ್ವಾಲಿಯರದ ಮೇಲೆ ದಾಳಿ ನಡೆಸಿದರು.




ರಾಣಿಯು ತನ್ನ ಮಗನೊಂದಿಗೆ ಸುರಕ್ಷಿತವಾಗಿ ಪಾರಾಗಲು ಪ್ರಯತ್ನಿಸಿದಳು. ರಣರಂಗಲ್ಲಿ ಅವಳು ಸಿಂಹದಂತೆ, ಧೈರ್ಯವಾಗಿ ಕಾದಾಡಿದಳು. ಆದರೆ ಸ್ವಲ್ಪವೇ ಸಮಯದಲ್ಲಿ ಅವಳು ಗಾಯಗೊಂಡಳು. ಮುಂದೆ ಬಲವಾದ ಹೊಡೆತಗಳಿಗೆ ತುತ್ತಾದಳು. ಸ್ವಾತಂತ್ರ್ಯದ ಪ್ರಥಮ ಯುದ್ಧದಲ್ಲಿ ಕೇವಲ ಅವರ ಪ್ರಯತ್ನಗಳಿಂದಾಗಯೇ ಜಯ ದೊರೆಯಿತು.

# A walk in the Moonlight Night ........

Most often we hear the appreciation of a walk in the morning but the real significance and value of a walk in the moonlight night are not commonly realized.

I, however, am in the habit of having a stroll after dinner . Sometimes, it is a dark night and sometimes a moonlight night. But I never miss this brief stroll in the park outside my house. The charm of this stroll is enhanced if it is a moonlight night .



Last night was full moon night . After taking dinner ,I went out of my house . The cool silvery moon light simply fascinated me. The glorious moon was shining in the little fairies it seemed to be a good companion, perhaps more lovable the reliable than a human companion.

My own shadow in the moonlight seemed to me just my own self or soul walking along with me. The shadows of trees on the roadside offered to me the hidden idea giants about which I had read in old story books .

I went to the park . The water of the fountain in the park glistened all the more in the silvery moon light. The leaves on

trees looked like a shining gold coins. The Human beings walking in streets and in the park all seemed to be strange creature from some other world .

I sat down on a bench in the park for some time and meditated. It seemed to me that I was going to have some mystic experience. My mind was calm and all tension and worries had fled from my Mind.

After sometime, I returned home . I was full of peace, love , joy and all that makes life worth living..................


# समस्यापूरणम्

श्रद्धया प्राप्यते लक्ष्यम्
श्रद्धया प्राप्यते गुरुः ।
श्रद्धया प्राप्यते मित्रम्
अश्रद्धा दुःख कारणम् ।।

सामवेद वेदग्रन्थे
सङ्गीतम् प्रतिपादिताम् ।
राग तालानि संयम्य
सङ्गीतम् सुख दायकम् ।।

– रम्या.के.
8 बी कक्ष्या

# Drawing




# Digital Painting




- Athmika U

9 B Standard


# Drawing



# Drawing




# Drawing



# Drawing




ಮದ್ಯಪಾನ ಶರೀರಕ್ಕೆ ಹಾನಿಕಾರಕ
ಬೇಡವೇ ಬೇಡ ಮದ್ಯಪಾನ
Drink to ki
Many peopl
ಧೂಮಪಾನದಿಂದ ದೂರವಿರಿ
ಮದ್ಯಪಾನವೇ ಜೀವಕ್ಕೆ ಹಾನಿಕಾರಕ


ALCOHOL CAUSES DEATH
DoNot Do THIS
Smoking is Injurious to our health
ಮಧ್ಯಪಾನದಿಂದ
ಕಾನ್ಸರ್
BAR
Drinks
Smoking
Please
Childrens are away from thi


# Drawing



# Drawing




# Drawing



# Drawing



# Drawing



# Our Little KITEs Unit





# ಧನ್ಯವಾದಗಳು